ಈ ಧೋರಣೆಯನ್ನು ಪ್ರತಿಭಟಿಸಿ ನಾವೂ ಸಭಾತ್ಯಾಗ ಮಾಡುತ್ತೇವೆ. ಈ ಕಾಂಗ್ರೇಸ್ ಸರಕಾರವು ರೈತರ ಪರವಾಗಿ ಇಲ್ಲ. ಲಕ್ಷಾಂತರ ತೆಂಗಿನ ಮರಗಳು ಸತ್ತು ಹೋಗಿದ್ದರೂ ಅವುಗಳಿಗೆ ಪರಿಹಾರವನ್ನು ಕೊಡುವುದಕ್ಕೆ ಇವರಿಂದ ಆಗುತ್ತ ಇಲ್ಲ. ಇಂಥ ಸರಕಾರದ ಕ್ರಮವನ್ನು ನಾವು ಪ್ರತಿಭಟಿಸುತ್ತೇವೆ.

(ಬಿ.ಜೆ.ಪಿ. ಪಕ್ಷದ ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಬಿ. ಸೋಮಶೇಖರ್ :– ರೈತರ ಕಷ್ಟಗಳಿಗೆ ಪರಿಹಾರ ನೀಡದ ಈ ಸರಕಾರದ ಕ್ರಮವನ್ನು ಖಂಡಿಸಿ ನಾವು ಸಭತ್ಯಾಗ ಮಾಡುತ್ತೇವೆ.

(ಅಖಿಲ ಭಾರತ ಪ್ರಗತಿಪರ ಜನತಾ ದಳದ ಸದಸ್ಯರು ಸರಕಾರದ ನಿಲುವನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡಿದರು ಹಾಗೂ ಸರಕಾರದ ನಿಲುವನ್ನು ಪ್ರತಿಭಟಿಸಿ ಜಾತ್ಯಾತೀತ ಜನತಾ ದಳದ ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು :– ಈಗ ಸದನವನ್ನು ನಾಳೆ ಬೆಳಿಗ್ಗೆ 11–00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು 7–32 ಗಂಟೆಗೆ ಮುಂದೂಡಲ್ಪಟ್ಟು ದಿನಾಂಕ 23–07–03 ರಂದು ಬೆಳಿಗ್ಗೆ 11–00 ಗಂಟೆಗೆ ಪುನಃ ಸಮಾವೇಶಗೊಳ್ಳಲು ನಿರ್ಧರಿಸಿತು)

ಅನುಬಂಧ – 1

ಜಮೀನಿನ ಹಕ್ಕು ಬದಲಾವಣೆಗೆ ಕಾಲಮಿತಿ ಬಗ್ಗೆ

418 (3811) : ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜಮೀನಿನ ಹಕ್ಕು ಬದಲಾವಣೆಯಾದ ನಂತರ ಮ್ಯುಟೇಷನ್‌ನಲ್ಲಿ ದಾಖಲಾಗಲು ನಿಗದಿಪಡಿಸಿರುವ ಕನಿಷ್ಠ ಕಾಲಮಿತಿ ಏನು;

ಆ) ಈ ಕಾಲಮಿತಿಯೊಳಗೆ ಮ್ಯುಟೇಷನ್‌ನಲ್ಲಿ ದಾಖಲಾಗದೆ ಅನಗತ್ಯ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರದ ಕ್ರಮವೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು)

ಅ) ಕರ್ನಾಟಕ ಭೂ ಕಂದಾಯ ನಿಯಮಾವಳಿಗಳು 1966 ರ ನಿಯಮ 64 (2) ಹಾಗೂ 65 ರ ಮೇರೆಗೆ ನಮೂನೆ 12 ಹಾಗೂ 21ಎ ಕುರಿತಂತೆ ಆಕ್ಷೇಪಣಾದಾರರಿಂದ 30 ದಿನಗಳ ಅವಧಿಯೊಳಗೆ ಆಕ್ಷೇಪಣೆಗಳನ್ನು ಪಡೆದು, ಯಾವುದೇ ಆಕ್ಷೇಪಣೆಗಳು ಬಾರದಿದ್ದಲ್ಲಿ ಮ್ಯುಟೇಷನ್‌ನಲ್ಲಿ ದಾಖಲಿಸಬಹುದಾಗಿದೆ.

ಆ) ಇಲ್ಲ.

ಇ) ಪ್ರಶ್ನೆ (ಅ) ದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳನ್ನು ರದ್ದುಗೊಳಿಸುವುದು

419 (4039) : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳ ಸಂಖ್ಯೆಎಷ್ಟು;

ಆ) ಇವುಗಳಲ್ಲಿ ಇಲ್ಲಿಯವರೆಗೆ ನೊಂದಾಯಿಸಿಕೊಂಡಿರುವ ನಿರುದ್ಯೋಗಿಗಳ ಸಂಖ್ಯೆ ಎಷ್ಟು;

ಇ) ಈ ಉದ್ಯೋಗ ವಿನಿಮಯ ಕೇಂದ್ರಗಳನ್ನು ರದ್ದು ಮಾಡಲು ಸರ್ಕಾರ ನಿರ್ಧರಿಸಿದೆಯೇ;

ಈ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು)

ಅ) ಕರ್ನಾಟಕ ರಾಜ್ಯದಲ್ಲಿ 34 ಉದ್ಯೋಗ ವಿನಿಮಯ ಕೇಂದ್ರಗಳಿವೆ.

ಆ) ಮೇ 2003ರ ಅಂತ್ಯಕ್ಕೆ 18,65,943 ಅರ್ಜಿಯರ್ಥಿಗಳು

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದಲ್ಲಿ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ

420 (3311) : ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ವಿಧಾನ ಸಭೆ ಕ್ಷೇತ್ರದಲ್ಲಿ ಎಷ್ಟು ಕಿಮೀ ರಾಷ್ಟ್ರೀಯ ಹೆದ್ದಾರಿ ರಸ್ತೆ ಡಾಂಬರೀಕರಣ ಮಾಡಲಾಗಿದೆ; ಇದುವರೆಗೂ ಖರ್ಚು ಮಾಡಿದ ಹಣ ಎಷ್ಟು;

ಆ) ಈ ಕ್ಷೇತ್ರದ ವ್ಯಾಪ್ತಿಯಲ್ಲಿ ರಾಜ್ಯ ಹೆದ್ದಾರಿಯನ್ನು ಎಷ್ಟು ಕಿಮೀ ರಸ್ತೆ ಡಾಂಬರೀಕರಣ ಹಗೂ ಮೆಟ್ಲಿಂಗ್ ಮಾಡಲಾಗಿದೆ;

ಇ) ಈ ಕಾಮಗಾರಿಗೆ ಬಿಡುಗಡೆಯಾದ ಹಣ ಎಷ್ಟು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದಲ್ಲಿ ಒಟ್ಟು 21.30 ಕಿ.ಮೀ ರಾಷ್ಟ್ರೀಯ ಹೆದ್ದಾರಿಯನ್ನು ಡಾಂಬರೀಕರಣ ಮಾಡಲಾಗಿದೆ ಇದುವರೆವಿಗೂ ಖರ್ಚು ಮಾಡಿದ ಹಣ ರೂ. 269.66 ಲಕ್ಷಗಳು.

ರಾಷ್ಟ್ರೀಯ ಹೆದ್ದಾರಿ ಹೆಸರು	ಒಟ್ಟು ಡಾಂಬರೀಕರಣ ಮಾಡಿದ ಉದ್ದ ಕಿ.ಮೀಗಳಲ್ಲಿ	ಒಟ್ಟು ಖರ್ಚು ಮಾಡಿರುವ ಹಣ (ಲಕ್ಷ ರೂ.ಗಳಲ್ಲಿ)
206	13.00	161.55
13	7.30	104.00
13	1.00	4.11
ಒಟ್ಟು	21.30	269.66

ಆ) 5.80 ಕಿ.ಮೀ

ಇ) ರೂ. 62.13 ಲಕ್ಷ